# ಗ್ರಾಹಕರ ಕುಂದುಕೊರತೆಗಳ ನಿವಾರಣಾ ವೇದಿಕೆ, ಕಾರ್ಯ ಮತ್ತು ಪಾಲನೆ

## ವೃತ್ತ ಹುವಿಸಕಂನಿ., ಬೆಳಗಾವಿ

### ಪ್ರಕರಣ ಸಂಖ್ಯೆ: 14/2017

ಹಾಜರಿದ್ದವರು :
1. ಶ್ರೀ.ಗಿರಿಧರ ಕುಲಕರ್ಣಿ, ಅಧೀಕ್ಷಕ ಅಭಿಯಂತರರು(ವಿ)(ಪ್ರ) ಹಾಗೂ ಅಧ್ಯಕ್ಷರು.
2. ಶ್ರೀ. ಎಸ್.ಆರ್. ಮಂಜಪ್ಪ, ಉಪಲೆಕ್ಕನಿಯಂತ್ರಣಾಧಿಕಾರಿ, ಸದಸ್ಯರು.
3. ಶ್ರೀ. ಸುನಿಲ್.ಎಸ್ ಸಾಣಿಕೊಪ್ಪ, ವಕೀಲರು, ಸದಸ್ಯರು.

ಶ್ರೀ ಎಸ್. ಎಸ್. ಶಾ,
ಎನ್-15, ಇಂಡಸ್ಟ್ರಿಯಲ್ ಎಸ್ಟೇಟ್,
ಉದ್ಯಮಭಾಗ,
ಬೆಳಗಾವಿ. ----------ದೂರುದಾರರು

ವಿರುದ್ಧ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ)
ಕಾರ್ಯ ಮತ್ತು ಪಾಲನೆ ನಗರ ಉಪವಿಭಾಗ-2,
ಹುವಿಸಕಂನಿ., ಬೆಳಗಾವಿ. ----------- ಪ್ರತಿವಾದಿ

1. ಶ್ರೀ. ಎಸ್.ಎಸ್. ಶಾ, ಎನ್-15, ಇಂಡಸ್ಟ್ರಿಯಲ್ ಎಸ್ಟೇಟ್, ಉದ್ಯಮಭಾಗ, ಬೆಳಗಾವಿ, ಇವರು ಕೆ.ಇ.ಆರ್.ಸಿ (ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆ ಮತ್ತು ಓಂಬಡ್ಸಮನ್) ನಿಬಂಧನೆಗಳು-2004 ರ ಅಡಿಯಲ್ಲಿ ಒದಗಿಸಿದ ಅವಕಾಶಗಳ ಅಡಿಯಲ್ಲಿ ತಮ್ಮ ದೂರನ್ನು ವೇದಿಕೆಗೆ ಸಲ್ಲಿಸಿರುವರು.

2. **ಪ್ರಕರಣದ ಸಾರಾಂಶ :**

ಶ್ರೀ ಎಸ್.ಎಸ್. ಶಾ, ಎನ್-15, ಇಂಡಸ್ಟ್ರಿಯಲ್ ಎಸ್ಟೇಟ್, ಉದ್ಯಮಭಾಗ, ಬೆಳಗಾವಿ, ರವರು ತಮ್ಮ ಹೆಸರಿನಲ್ಲಿರುವ ಸ್ಥಾವರ ಸಂಖ್ಯೆ ಎಂ-62.1599 ಕ್ಕೆ ಎಲ್.ಟಿ-3 ಜಕಾತಿಯಲ್ಲಿ ವಿಧಿಸಲಾಗಿರುವ ಹಿಂಬಿಲ್ಲು ಮೊತ್ತವನ್ನು ಆಕ್ಷೇಪಿಸಿ ವೇದಿಕೆಗೆ ದೂರು ಅರ್ಜಿ ಸಲ್ಲಿಸಿದ್ದಾರೆ.

3. **ಗ್ರಾಹಕರ ಹೇಳಿಕೆ :**

ಶ್ರೀ ಎಸ್.ಎಸ್. ಶಾ, ಮಾಣಿಕ್ ಎಂಟರ್‌ಪ್ರೈಸಸ್ ಎನ್-15, ಇಂಡಸ್ಟ್ರಿಯಲ್ ಎಸ್ಟೇಟ್, ಉದ್ಯಮಭಾಗ, ಬೆಳಗಾವಿ, ರವರು

- ತಮ್ಮ ಸ್ಥಾವರ ಸಂಖ್ಯೆ: ಎಂ--62.1599 ಗೆ ಎಲ್.ಟಿ-5 ಜಕಾತಿಯಲ್ಲಿ ವಿದ್ಯುತ್ ಸಂಪರ್ಕವಿದ್ದು, ಸಕಾನಿಇಂ(ವಿ), ಎಲ್.ಟಿ.ಎಂ.ಆರ್ ಉಪವಿಭಾಗದವರು ಸದರಿ ಸ್ಥಾವರದ ಪರಿವೀಕ್ಷಣೆ ಮಾಡಿ ವರದಿ ದಿನಾಂಕ 13.01.2017 ರಲ್ಲಿ ಸ್ಥಾವರವನ್ನು ವಾಣಿಜ್ಯ ಉದ್ದೇಶಕ್ಕಾಗಿ ಬಳಸಲಾಗುತ್ತಿದೆ ಎಂದು ವರದಿ ನೀಡಿದ್ದು, ಅದರಂತೆ ನಗರ ಉಪವಿಭಾಗ-2 ರಿಂದ ಜೂನ್-2016 ರಿಂದ ಜನವರಿ-2017 ರ ವರೆಗಿನ ಅವಧಿಗೆ ಹಿಂಬಿಲ್ಲು ರೂ.56498/- ನ್ನು ವಿಧಿಸಿದ್ದು, ದಿನಾಂಕ 02.03.2017(ರಶೀದಿ ಸಂಖ್ಯೆ 677517367337) ರಂದು ಸದರಿ ಹಿಂಬಿಲ್ಲು ಮೊತ್ತ ಪಾವತಿಸಲಾಗಿದೆ.
- ಸದರಿ ಸ್ಥಾವರವಿರುವ ಕಾರಿನ ಸರ್ವೀಸ್ ವರ್ಕ್‌ಶಾಪ್‌ನ್ನು ದಿ:29.08.2016 ರಿಂದ ಪ್ರಾರಂಭಿಸಲಾಗಿದೆ. ದಾಖಲೆ ಸಲ್ಲಿಸಿದೆ.
- ನಂತರ ದಿ:13.04.2017 ರಂದು ಸಕಾನಿಇಂ(ವಿ), ಎಲ್.ಟಿ.ಎಂ.ಆರ್ ಉಪವಿಭಾಗದವರು ಪುನಃ ಸದರಿ ಸ್ಥಾವರವನ್ನು ಪರಿವೀಕ್ಷಣೆ ಮಾಡಿ ವರದಿ ನೀಡಿದ್ದು, ಜಕಾತಿ ದುರುಪಯೋಗಕ್ಕಾಗಿ ಮೇ-2017 ರ ಬಿಲ್ಲಿನಲ್ಲಿ ರೂ.37671/- ವಿಧಿಸಿರುತ್ತಾರೆ.

29/9/18 29/9/18

- ಎಲ್.ಟಿ-5 ಜಕಾತಿಯಿಂದ ಎಲ್.ಟಿ-3 ಜಕಾತಿ ಬದಲಾವಣೆಗೆ ದಿನಾಂಕ 25.03.2017 ರಂದು ಅರ್ಜಿ ಸಲ್ಲಿಸಲಾಗಿದೆ.
- ನಂತರ ಆಗಸ್ಟ್-2017 ರ ಬಿಲ್ಲಿನಲ್ಲಿ ಜಕಾತಿ ಬದಲಾವಣೆ ದಿನಾಂಕ 21.07.2017 ರ ವರೆಗಿನ ಅವಧಿಗಾಗಿ ಹಿಂಬಿಲ್ಲು ರೂ.55340/- ನ್ನು ವಿಧಿಸಲಾಗಿದೆ.
- ಆದ್ದರಿಂದ ಜೂನ್-2016 ರಿಂದ ಜನವರಿ-2017 ರ ವರೆಗೆ ವಿಧಿಸಿದ ಹಿಂಬಿಲ್ಲನ್ನು ಕಾರಿನ ಸರ್ವೀಸ್ ವರ್ಕ್‌ಶಾಪ್‌ನ್ನು ಪ್ರಾರಂಭಿಸಿದ ದಿನಾಂಕ 29.08.2016 ರಿಂದ ಹಾಗೂ ನಂತರದ ಹಿಂಬಿಲ್ಲನ್ನು ಜಕಾತಿ ಬದಲಾವಣೆಗೆ ಅರ್ಜಿ ಸಲ್ಲಿಸಿದ ದಿನಾಂಕ 25.03.2017 ವರೆಗೆ ಪರಿಷ್ಕರಿಸಬೇಕಾಗಿ ವಿನಂತಿಸಿರುತ್ತಾರೆ.

**4. ಕಂಪನಿ ಪರವಾಗಿ :**

**1.ಶ್ರೀ. ಜಿ.ಎನ್ ಪಾಲ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ(ವಿ), ಕಾ ಮತ್ತು ಪಾ ನಗರ ಉಪವಿಭಾಗ-2, ಹುವಿಸಕಂನಿ., ಬೆಳಗಾವಿ ಇವರ ಹೇಳಿಕೆ:-**

- ಸ್ಥಾವರ ಸಂಖ್ಯೆ ಎಂ.62.1599 ಮೆ|ಮಾ ಜೆ.ಕೆ ಕ್ರಾಂಕ್ ಶಾಫ್ಟ್ ಇಂಡಸ್ಟ್ರಿ ಹೆಸರಿನಲ್ಲಿ ಎಲ್.ಟಿ-5ಎ ಜಕಾತಿಯಲ್ಲಿ 50 ಎಚ್.ಪಿ ಸಂಪರ್ಕಿತ ಹೊರೆಯೊಂದಿಗೆ ದಿ:18-11-1998 ರಂದು ವಿದ್ಯುತ್ ಸಂಪರ್ಕ ಹೊಂದಿದ್ದು, ನಂತರ ದಿನಾಂಕ 02-03-2016 ರಂದು ಶ್ರೀ ಶೈಲೇಶ್ ಶಾಂತಿಲಾಲ್ ಶಾ ಇವರ ಹೆಸರಿಗೆ ಬದಲಾವಣೆಗೊಂಡಿರುತ್ತದೆ.
- ಸದರಿ ಸ್ಥಾವರವನ್ನು ಸಕಾನಿಇಂ(ವಿ), ಎಲ್.ಟಿ.ಎಂ.ಆರ್ ಉಪವಿಭಾಗ, ಬೆಳಗಾವಿ ರವರು ದಿನಾಂಕ 13-01-2017 ರಂದು ಸ್ಥಳ ಪರಿಶೀಲನೆ ನಡೆಸಿ ಸದರಿ ಸ್ಥಾವರವನ್ನು ಎಲ್.ಟಿ-3 ಜಕಾತಿಗೆ ಅನ್ವಯವಾಗುವಂತೆ ಕಾರು ಸರ್ವೀಸಿಂಗ್ ಸೆಂಟರ್ (Car Servicing Centre) ಗೋಸ್ಕರ ಬಳಸಲಾಗುತ್ತಿರುವುದಾಗಿ ವರದಿ ನೀಡಿರುತ್ತಾರೆ. ಸದರಿ ವರದಿ ಅನ್ವಯ ನಗರ ಉಪವಿಭಾಗ-2 ರ ಪತ್ರ ಸಂಖ್ಯೆ 8203-04 ದಿನಾಂಕ 16-01-2017 ರಲ್ಲಿ ಜುಲೈ-2016 ರಿಂದ ಡಿಸೆಂಬರ್-2016 ರ ವರೆಗೆ 6 ತಿಂಗಳ ಅವಧಿಗೆ ರೂ.56498/- ಹಿಂಬಿಲ್ಲು ವಿಧಿಸಲಾಗಿದೆ. ಗ್ರಾಹಕರು ರೂ.56498/- ನ್ನು ದಿನಾಂಕ 02-03-2017 ರಂದು ರಶೀದಿ ಸಂಖ್ಯೆ 367337 ರಲ್ಲಿ ಪಾವತಿಸಿರುತ್ತಾರೆ.
- ದಿನಾಂಕ 31-03-2017 ರಂದು ಗ್ರಾಹಕರು ಹೆಚ್ಚುವರಿ ಸಂಪರ್ಕಿತ ಹೊರೆ ಕಡಿಮೆಗೊಳಸಲು ಮತ್ತು ಜಕಾತಿ ಬದಲಾವಣೆಗಾಗಿ ಅರ್ಜಿ ಸಲ್ಲಿಸಿದ್ದು, ಇದಕ್ಕಾಗಿ ನಿಗದಿಪಡಿಸಿದ ಶುಲ್ಕ ಪಾವತಿಸಿರುವುದಿಲ್ಲ.
- ಸಕಾನಿಇಂ(ವಿ), ಎಲ್.ಟಿ.ಎಂ.ಆರ್ ಉಪವಿಭಾಗ, ಬೆಳಗಾವಿ ರವರು ಪುನಃ ದಿನಾಂಕ 13-04-2017 ರಂದು ಸ್ಥಳ ಪರಿಶೀಲನೆ ನಡೆಸಿ ಸದರಿ ಸ್ಥಾವರವನ್ನು ಎಲ್.ಟಿ-3 ಜಕಾತಿಗೆ ಅನ್ವಯವಾಗುವಂತೆ ವಾಣಿಜ್ಯ ಉದ್ದೇಶಕ್ಕಾಗಿ ಬಳಸಲಾಗುತ್ತಿರುವುದಾಗಿ ವರದಿ ಸಂಖ್ಯೆ 59738/13-04-2017 ರಲ್ಲಿ ವರದಿ ನೀಡಿರುತ್ತಾರೆ. ಸದರಿ ವರದಿ ಅನ್ವಯ ಜನವರಿ-2017 ರಿಂದ ಮಾರ್ಚ್-2017 ರ ವರೆಗೆ 3 ತಿಂಗಳ ಅವಧಿಗೆ ರೂ.37671/- ಹಿಂಬಿಲ್ಲು ವಿಧಿಸಲಾಗಿದೆ. ಸದರಿ ಹಿಂಬಿಲ್ಲು ಮೊತ್ತ ರೂ.37671/- ನ್ನು ರಶೀದಿ ಸಂಖ್ಯೆ 396962 ದಿನಾಂಕ 09-09-2017 ರಲ್ಲಿ ಪಾವತಿಸಿರುತ್ತಾರೆ.
- ಸದರಿ ಸ್ಥಾವರದ ಹೆಚ್ಚುವರಿ ಸಂಪರ್ಕಿತ ಹೊರೆ ಕಡಿಮೆಗೊಳಸಲು ಶುಲ್ಕ ರೂ.100/- ನ್ನು ರಶೀದಿ ಸಂಖ್ಯೆ 320071 ದಿ:15-06-2017 ರಲ್ಲಿ ಪಾವತಿಸಿದ್ದು, ಶಾಖಾಧಿಕಾರಿ, ಶಾಖೆ-6 ರವರ ಫೀಸಿಬಿಲಿಟಿ ರಿಪೋರ್ಟ್ ಸಂಖ್ಯೆ 640/16-06-2017 ರಂತೆ ನಗರ ಉಪವಿಭಾಗ-2 ರ ಅ.ಜ್ಞಾ ಪತ್ರ ಸಂಖ್ಯೆ 6950619681 ದಿನಾಂಕ 19-07-2017 ಪ್ರಕಾರ ಹೆಚ್ಚುವರಿ ಸಂಪರ್ಕಿತ ಹೊರೆ 50 ಹೆಚ್.ಪಿ ಯಿಂದ 23 ಕಿ.ವ್ಯಾ ಗೆ ಕಡಿತಗೊಳಸಲಾಗಿದೆ. ನಗರ ಉಪವಿಭಾಗ-2 ರ ಆವರಣದಲ್ಲಿ ದಿನಾಂಕ 22-06-2017 ರಂದು ಶಾರ್ಟ್ ಸರ್ಕ್ಯೂಟ್ ಆಗಿ ಕಂಪ್ಯೂಟರ್, ರೌಟರ್ ಸುಟ್ಟುಹೋಗಿದ್ದು, ಸದರಿ ವ್ಯವಸ್ಥೆಯು ದಿ:15-07-2017 ರಂದು ಸರಿಯಾದ ಕಾರಣ, ಹೆಚ್ಚುವರಿ ಹೊರೆ ಕಡಿತಗೊಳಸುವ ಅ.ಜ್ಞಾ ಪತ್ರ ಹೊರಡಿಸುವಲ್ಲಿ ವಿಳಂಬವಾಗಿದೆ.
- ಸ್ಥಾವರ ಸಂಖ್ಯೆ ಎಂ.62.1599 ರ ಜಕಾತಿ ಎಲ್.ಟಿ-5 ಯಿಂದ ಎಲ್.ಟಿ-3 ಗೆ ಬದಲಾವಣೆಗಾಗಿ ಬಳಕೆದಾರರು ಶುಲ್ಕ ರೂ.100/- ನ್ನು ದಿ:19-07-2017 ರಂದು ರಶೀದಿ ಸಂಖ್ಯೆ 349058 ರಲ್ಲಿ ಪಾವತಿಸಿದ್ದು, ನಗರ ಉಪವಿಭಾಗ-2 ರ ಅ.ಜ್ಞಾ ಪತ್ರ ಸಂಖ್ಯೆ 6950619767 ದಿ:21-07-2017 ಮತ್ತು ತಿದ್ದುಪಡಿ ಆದೇಶ 8121 ದಿ: 09-02-2018 ರ ಪ್ರಕಾರ ದಿ:21-07-2017 ರಿಂದ ಮುಂದಿನ ಮಾಪಕ ಓದುವ ದಿನಾಂಕದಿಂದ ಜಾರಿಗೆ ಬರುವಂತೆ ಜಕಾತಿ ಬದಲಾವಣೆ ಮಾಡಲಾಗಿದೆ.



27/9/18 ... 28/9/18 ... 28/9/18

➢ ನಂತರ ಏಪ್ರಿಲ್-2017 ರಿಂದ ಜಕಾತಿ ಬದಲಾವಣೆ ದಿ:21-07-2017 ರ ವರೆಗೆ ಹಿಂಬಿಲ್ಲು ರೂ.55340/- ನ್ನು ವಿಧಿಸಲಾಗಿದೆ.

➢ ಸದರಿ ಸ್ಥಾವರದ ಗ್ರಾಹಕರು ದಿ:24-08-2017 ರಂದು ಸದರಿ ಹಿಂಬಿಲ್ಲುಗಳಿಗೆ ಆಕ್ಷೇಪಣೆ ಸಲ್ಲಿಸಿರುತ್ತಾರೆ.

## 5. ವೇದಿಕೆಯು ಗಮನಿಸಿರುವ ಅಂಶಗಳು:

1. ಸ್ಥಾವರ ಸಂಖ್ಯೆ ಎಂ.62.1599 ಗೆ ಮೆ।ಮಾ ಜೆ.ಕೆ ಕ್ರಾಂಕ್ ಶಾಫ್ಟ್ ಇಂಡಸ್ಟ್ರಿ ಹೆಸರಿನಲ್ಲಿ ಎಲ್.ಟಿ-5ಎ ಜಕಾತಿಯಲ್ಲಿ 50 ಎಚ್.ಪಿ ಸಂಪರ್ಕಿತ ಹೊರೆಯೊಂದಿಗೆ ದಿ:18-11-1998 ರಂದು ವಿದ್ಯುತ್ ಸಂಪರ್ಕ ಹೊಂದಿದ್ದು, ನಂತರ ದಿ:02-03-2016 ರಂದು ಶ್ರೀ ಶೈಲೇಶ್ ಶಾಂತಿಲಾಲ್ ಶಾ, ಮಾಣಿಕ್ ಎಂಟರ್‌ಪ್ರೈಸಸ್, ಎನ್-15, ಇಂಡಸ್ಟ್ರಿಯಲ್ ಎಸ್ಟೇಟ್, ಉದ್ಯಮಭಾಗ, ಬೆಳಗಾವಿ, ಇವರ ಹೆಸರಿಗೆ ಬದಲಾವಣೆಗೊಂಡಿರುತ್ತದೆ.
2. ಸಕಾನಿಇಂ(ವಿ), ಎಲ್.ಟಿ.ಎಂ.ಆರ್ ಉಪವಿಭಾಗ, ಬೆಳಗಾವಿ ರವರು ದಿ:13-01-2017 ರಂದು ಎಂ.62.1599 ಸ್ಥಾವರದ ಸ್ಥಳ ಪರಿಶೀಲನೆ ನಡೆಸಿ ತಮ್ಮ ವರದಿಯಲ್ಲಿ ಸದರಿ ಸ್ಥಾವರವನ್ನು ಎಲ್.ಟಿ-3 ಜಕಾತಿಗೆ ಅನ್ವಯವಾಗುವಂತೆ ಕಾರು ಸರ್ವೀಸಿಂಗ್ ಸೆಂಟರ್ (Car Servicing Centre) ಗೋಸ್ಕರ ಬಳಸಲಾಗುತ್ತಿರುವುದಾಗಿ ವರದಿ ನೀಡಿರುತ್ತಾರೆ. ಸದರಿ ವರದಿ ಅನ್ವಯ ನಗರ ಉಪವಿಭಾಗ-2 ರ ಪತ್ರ ಸಂಖ್ಯೆ 8203-04 ದಿ:16-01-2017 ರಲ್ಲಿ ಜುಲೈ-2016 ರಿಂದ ಡಿಸೆಂಬರ್-2016 ರ ವರೆಗೆ 6 ತಿಂಗಳ ಅವಧಿಗೆ ರೂ.56498/- ಹಿಂಬಿಲ್ಲು ವಿಧಿಸಲಾಗಿದ್ದು, ಸದರಿ ಹಿಂಬಿಲ್ಲು ರೂ.56498/- ನ್ನು ಗ್ರಾಹಕರು ದಿ:02-03-2017 ರಂದು ರಶೀದಿ ಸಂಖ್ಯೆ 367337 ರಲ್ಲಿ ಪಾವತಿಸಿರುವುದನ್ನು ಗಮನಿಸಲಾಗಿದೆ.
3. ಸ್ಥಾವರ ಸಂಖ್ಯೆ ಎಂ.62.1599 ರ ಸಂಪರ್ಕಿತ ಹೊರೆ 50 ಹೆಚ್.ಪಿ ಯಿಂದ 23 ಕಿ.ವ್ಯಾ ಗೆ ಕಡಿಮೆಗೊಳಸಲು ಮತ್ತು ಎಲ್.ಟಿ-5 ಯಿಂದ ಎಲ್.ಟಿ-3 ಗೆ ಜಕಾತಿ ಬದಲಾವಣೆಗಾಗಿ ದಿ:31-03-2017 ರಂದು ನಿಗದಿತ ನಮೂನೆಯಲ್ಲಿ ಗ್ರಾಹಕರು ಅರ್ಜಿ ಸಲ್ಲಿಸಿದ್ದು, ಇದಕ್ಕಾಗಿ ನಿಗದಿಪಡಿಸಿದ ಶುಲ್ಕ (Registration cum Processing Fee) ವನ್ನು ಅರ್ಜಿಯೊಂದಿಗೆ ಪಾವತಿಸಿರುವುದಿಲ್ಲ.
4. ಸಕಾನಿಇಂ(ವಿ), ಎಲ್.ಟಿ.ಎಂ.ಆರ್ ಉಪವಿಭಾಗ, ಬೆಳಗಾವಿ ರವರು ದಿ:13-04-2017 ರಂದು ಪುನಃ ಸದರಿ ಸ್ಥಾವರದ ಸ್ಥಳ ಪರಿಶೀಲನೆ ನಡೆಸಿ ಸದರಿ ಸ್ಥಾವರವನ್ನು ಎಲ್.ಟಿ-3 ಜಕಾತಿಗೆ ಅನ್ವಯವಾಗುವಂತೆ ವಾಣಿಜ್ಯ ಉದ್ದೇಶಕ್ಕಾಗಿ ಬಳಸಲಾಗುತ್ತಿರುವುದಾಗಿ ವರದಿ ಸಂಖ್ಯೆ 59738/13-04-2017 ರಲ್ಲಿ ವರದಿ ನೀಡಿರುತ್ತಾರೆ. ಸದರಿ ವರದಿ ಅನ್ವಯ ಜನವರಿ-2017 ರಿಂದ ಮಾರ್ಚ್-2017 ರ ವರೆಗೆ 3 ತಿಂಗಳ ಅವಧಿಗೆ ರೂ.37671/- ಹಿಂಬಿಲ್ಲನ್ನು ಮೇ-2017 ರ ವಿದ್ಯುತ್ ಬಿಲ್ಲಿನಲ್ಲಿ ವಿಧಿಸಲಾಗಿದ್ದು, ಸದರಿ ಹಿಂಬಿಲ್ಲು ಮೊತ್ತ ರೂ.37671/- ನ್ನು ಬಳಕೆದಾರರು ರಶೀದಿ ಸಂಖ್ಯೆ 396962 ದಿ:09-09-2017 ರಲ್ಲಿ ಪಾವತಿಸಿರುವುದನ್ನು ಗಮನಿಸಲಾಗಿದೆ.
5. ಸದರಿ ಸ್ಥಾವರದ ಸಂಪರ್ಕಿತ ಹೊರೆ ಕಡಿಮೆಗೊಳಸಲು, ಕೆ.ಇ.ಆರ್.ಸಿ ವಿದ್ಯುತ್ ಸರಬರಾಜು ನಿಯಮಾವಳಿ ಸೆಕ್ಷನ್ 30.01 ರಂತೆ ಶುಲ್ಕ (Registration cum Processing Fee) ರೂ.100/- ನ್ನು ಬಳಕೆದಾರರು ರಶೀದಿ ಸಂಖ್ಯೆ 320071 ದಿ:15-06-2017 ರಲ್ಲಿ ಪಾವತಿಸಿದ್ದು, ಶಾಖಾಧಿಕಾರಿ, ಶಾಖೆ-6 ರವರ ಫೀಸಿಬಿಲಿಟಿ ರಿಪೋರ್ಟ್ ಸಂಖ್ಯೆ 640/16-06-2017 ರಂತೆ ನಗರ ಉಪವಿಭಾಗ-2 ರ ಅ.ಜ್ಞಾ ಪತ್ರ ಸಂಖ್ಯೆ 6950619681 ದಿ:19-07-2017 ಪ್ರಕಾರ ಸ್ಥಾವರ ಸಂಖ್ಯೆ ಎಂ.62.1599 ರ ಸಂಪರ್ಕಿತ ಹೊರೆ 50 ಹೆಚ್.ಪಿ ಯಿಂದ 23 ಕಿ.ವ್ಯಾ ಗೆ ಕಡಿತಗೊಳಸಲಾಗಿದೆ.
6. ಸ್ಥಾವರ ಸಂಖ್ಯೆ ಎಂ.62.1599 ರ ಜಕಾತಿ ಎಲ್.ಟಿ-5 ಯಿಂದ ಎಲ್.ಟಿ-3 ಗೆ ಬದಲಾವಣೆಗಾಗಿ, ಕೆ.ಇ.ಆರ್.ಸಿ ವಿದ್ಯುತ್ ಸರಬರಾಜು ನಿಯಮಾವಳಿ ಸೆಕ್ಷನ್ 30.11 ರಂತೆ ಶುಲ್ಕ (Transfer Fee) ರೂ.100/- ನ್ನು ಬಳಕೆದಾರರು ದಿ:19-07-2017 ರಂದು ರಶೀದಿ ಸಂಖ್ಯೆ 349058 ರಲ್ಲಿ ಪಾವತಿಸಿದ್ದು, ನಗರ ಉಪವಿಭಾಗ-2 ರ ಅ.ಜ್ಞಾ ಪತ್ರ ಸಂಖ್ಯೆ 6950619767 ದಿ:21-07-2017 ಮತ್ತು ತಿದ್ದುಪಡಿ ಆದೇಶ 8121 ದಿ: 09-02-2018 ರ ಪ್ರಕಾರ ದಿ:21-07-2017 ರಿಂದ ಮುಂದಿನ ಮಾಪಕ ಓದುವ ದಿನಾಂಕದಿಂದ ಜಾರಿಗೆ ಬರುವಂತೆ ಜಕಾತಿ ಬದಲಾವಣೆ ಮಾಡಲಾಗಿದೆ.

--3--

29/9/18 29/9/18 29/9/18

7. ನಂತರ ಏಪ್ರಿಲ್-2017 ರಿಂದ ಜಕಾತಿ ಬದಲಾವಣೆ ದಿ:21-07-2017 ರ ವರೆಗೆ ಅಂತಿಮವಾಗಿ ಹಿಂಬಿಲ್ಲು ರೂ.55340/- ನ್ನು ವಿಧಿಸಲಾಗಿದೆ.

8. ಗ್ರಾಹಕರು ಸಲ್ಲಿಸಿದ ದಾಖಲೆಗಳ ಅನುಸಾರ ಸ್ಥಾವರ ಸಂಖ್ಯೆ ಎಂ.62.1599 ರಲ್ಲಿ ಮಾಣಿಕ್ ಎಂಟರ್‌ಪ್ರೈಸಸ್ ಕಾರಿನ ಸರ್ವೀಸ್ ಸ್ಟೇಷನ್ ನ್ನು ದಿ:29.08.2016 ರಿಂದ ಪ್ರಾರಂಭಿಸಲಾಗಿದೆ.

9. ಕೆ.ಇ.ಆರ್.ಸಿ ವಿದ್ಯುಚ್ಛಕ್ತಿ ದರಗಳು-2018 ರ ಅನುಸಾರ ವಾಣಿಜ್ಯ ದೀಪ, ತಾಪನ ಮತ್ತು ಮೋಟಿವ್ ಪವರ್ ವಿದ್ಯುತ್ ನ್ನು ಬಳಸುವ ಸರ್ವೀಸ್ ಸ್ಟೇಷನ್ (Service Station) ಗಳನ್ನು ಎಲ್.ಟಿ-3 ಜಕಾತಿಯಲ್ಲಿ ಪರಿಗಣಿಸಲಾಗಿದೆ.

10. ಕೆ.ಇ.ಆರ್.ಸಿ ವಿದ್ಯುತ್ ಸರಬರಾಜು ನಿಯಮಾವಳಿ ಸೆಕ್ಷನ್ 42.02 ರಂತೆ : **MISUSE OF ELECTRICITY**

a. If at any time, the energy supplied under one method of charging is misused for purpose for which a higher method of charging is in force, the Assessing officer shall assess the quantum of energy and difference in fixed charges **for the entire period during which such unauthorised use of electricity has taken place and if, however, the period during which such unauthorized use of electricity has taken place can not be as certained, such period shall be limited to a period of 12 months immediately precedings the date of inspection** and charge at two times the Tariff applicable to the purpose for which the energy is misused.

The Consumer shall pay such amount within thirty days from the date of claim, failing which, the installation is liable for disconnection and such amount shall be deemed to be arrears of electricity charges.

b. From the date of detection till such time the misuse is discontinued and reported by the Consumer to the Licensee in writing or the loads are suitably bifurcated by complying with the relevant requirements of the Licensee, the higher Tariff shall be applicable **at two times as per Amendment vide Notification No. KERC/COS/D/07/08 Dated : 14.03.2008 published in Karnataka Gazette Dated : 20.03.2008 Old Version : One and half times** the Tariff applicable on the proportionates consumption and Demand Charges / Fixed Charges of the Installation. The entitlement shall be revised, as applicable, to the higher Tariff in case of period of power cut.

The misuse shall be reqularized within 3 months, failing which, power supply to the installation shall be liable to be disconnected.

**6. ವೇದಿಕೆಯ ಅಭಿಪ್ರಾಯ :**

Conditions of Supply of Electricity of Distributiion Licencee in the State of Karnataka ದ Clause 42.02 ಈ ರೀತಿ ಇರುತ್ತದೆ.

**42.02 MISUSE OF ELECTRICITY**

ಮೇಲಿನ Clause 42.02 ನ್ನು ಆಧರಿಸಿ ಈ ಕೆಳಗಿನಂತೆ ಅಭಿಪ್ರಾಯಪಡಲಾಗಿದೆ.

29/9/18 29/9/18 29/9/18

1. ವಿದ್ಯುಚ್ಛಕ್ತಿ ದುರುಪಯೋಗದ ಅವಧಿಯನ್ನು ನಿರ್ಧಾರಣಾ ಅಧಿಕಾರಿಯು ನಿರ್ಧಸಬೇಕಾಗಿದ್ದು. ನಿರ್ಧರಿಸುವ ಪೂರ್ಣಾವಧಿಗೆ ಹಿಂಬಿಲ್ಲು ಮಾಡಬೇಕಾಗಿದ್ದು, ವಿದ್ಯುಚ್ಛಕ್ತಿ ದುರುಪಯೋಗದ ಪೂರ್ಣಾವಧಿಯನ್ನು ನಿರ್ಧಿಸಲು ಸಾಧ್ಯವಾಗದೇ ಇದ್ದಲ್ಲಿ ಪರಿವೀಕ್ಷಣಾ ದಿನಾಂಕ ಹಿಂದಿನ ಗರಿಷ್ಟ ಹನ್ನೆರಡು ತಿಂಗಳುಗಳಿಗೆ ಹಿಂಬಿಲ್ಲನ್ನು ಮಿತಗೊಳಸಬೇಕಾಗಿರುತ್ತದೆ.
2. ಸದರಿ ಪ್ರಕರಣದಲ್ಲಿ ನಿರ್ಧರಣಾ ಅಧಿಕಾರಿಯು ಹಿಂದಿನ ಆರು ತಿಂಗಳಿಗೆ ಹಿಂಬಿಲ್ಲು ವಿಧಿಸಲು ತಮ್ಮ ವರದಿಯಲ್ಲಿ ತಿಳಿಸಿರುವುದರಿಂದ ಆರು ತಿಂಗಳಿಗೆ ಹಿಂಬಿಲ್ಲು ಆಕರಿಸಿರುತ್ತದೆ. ಆದರೆ ಗ್ರಾಹಕರು ದಿನಾಂಕ 29.08.2016 ರಿಂದ ಕಾರಿನ ಸರ್ವೀಸ್ ವರ್ಕ್‌ಶಾಪ್‌ನ್ನು ಪ್ರಾರಂಭಿಸಿರುವು ಬಗ್ಗೆ ದಾಖಲೆಗಳನ್ನು ಸಲ್ಲಿಸಿರುವುದರಿಂದ ಈಗಾಗಲೇ ಆಕರಿಸಿರುವ ಹಿಂಬಿಲ್ಲು ರೂ. 56498.00 ಗಳನ್ನು ದಿನಾಂಕ 29.08.2016 ರಿಂದ 14.01.2017 ರವರೆಗೆ ಪರಿಷ್ಕರಿಸಬೇಕೆಂದು ಅಭಿಪ್ರಾಯಪಡಲಾಗಿದೆ.
3. ಶಾಖಾಧಿಕಾರಿಯವರು 13.01.2017 ರಂದು ಪರಿವೀಕ್ಷಣೆ ಕೈಗೊಂಡಿದ್ದು ದಿನಾಂಕ 12.04.2017 ರ ಒಳಗಾಗಿ ವಿದ್ಯುಚ್ಛಕ್ತಿ ದುರುಪಯೋಗವನ್ನು ಸಕ್ರಮಗೊಳಸಬೇಕಾಗಿದ್ದು, ಗ್ರಾಹಕರು ಜಕಾತಿ ಬದಲಾವಣೆ ಅರ್ಜಿಯನ್ನು ದಿನಾಂಕ 31.03.2017 ರಂದು ಶುಲ್ಕ ಪಾವತಿಸದೇ ಸಲ್ಲಿಸಿದ್ದು ತಕ್ಷಣ ಶುಲ್ಕ ಪಾವತಿಸಿಗೊಂಡು ಜಕಾತಿ ಬದಲಾವಣೆ ಮಾಡದೇ ದಿನಾಂಕ 19.07.2017 ರಂದು ಶುಲ್ಕ ಪಾವತಿಸಿದ ನಂತರ ದಿನಂಕ 21.07.2017 ರಂದು ಅಧಿಕೃತ ಜ್ಞಾಪನಾ ಪತ್ರ ಹೊರಡಿಸಿರುವ ಕ್ರಮವು ಸರಿಯಾಲ್ಲ, ಬದಲಾಗಿ ದಿನಾಂಕ 13.04.2017 ರಂದೇ ಸ್ಥಾವರದ ವಿದ್ಯುತ್ ನಿಲುಗಡೆಗೊಳಸಬೇಕಾಗಿತ್ತು.
4. ಸ್ಥಾವರಗಳನ್ನು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಮಾಪಕ ತಪಾಸಣಾ ವಿಭಾಗರವರು ಪು:ನ ದಿನಾಂಕ 13.04.2017 ರಂದು ಪರಿವೀಕ್ಷಣೆ ಮಾಡಿದ್ದು ವರದಿ ಸಂಖ್ಯೆ : 59738 ನ್ನು ಸಲ್ಲಿಸಿದ್ದು ಜನೇವರಿ-2017 ರಿಂದ ಮಾರ್ಚ-2017 ರ ವರೆಗೆ ಹಿಂಬಿಲ್ಲು ರೂ. 37671.00 ವಿಧಿಸಿರುವುದು ಕ್ರಮ ಬದ್ಧವಾಗಿರುತ್ತದೆ.
5. ಏಪ್ರಿಲ್-2017 ರಿಂದ ದಿನಾಂಕ 21.07.2017 ರ ವರೆಗೆ (ಜಕಾತಿ ಬದಲಾವಣೆ ಶುಲ್ಕ ಪಾವತಿಸಿದ ದಿನಾಂಕ ಪು:ನ ರೂ. 55340.00 ಹಿಂಬಿಲ್ಲು ವಿಧಿಸಿರುವುದು ಸರಿಯಾದ ಕ್ರಮವಲ್ಲವೆಂದು ಅಭಿಪ್ರಯಪಡೆಲಾಗಿದೆ, ಬದಲಾಗಿ ದಿನಾಂಕ 01.04.2017 ರಿಂದ 12.04.2017 ರ ವರೆಗೆ ಸಾಮಾನ್ಯ / ಸಹಜ / ಸಾಧಾರಣಾ ದಿಂದ ಎರಡು ಪಟ್ಟಿ ಹಿಂಬಿಲ್ಲು ವಿಧಿಸಿ ದಿನಾಂಕ 13.04.2017 ರಿಂದ ದಿನಾಂಕ 21.07.2017 ರ ವರೆಗೆ ಸಾಮಾನ್ಯ / ಸಹಜ / ಸಾಧಾರಣಾದಿಂದಲ್ಲಿ ಬಿಲ್ಲು ವಿಧಿಸುವುದು ಸೂಕ್ತವೆಂದು ಅಭಿಪ್ರಾಯಪಡಲಾಗಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ, ಪರಿವೀಕ್ಷಣಾ ಅಧಿಕಾರಿಗಳು ನೀಡಿರುವ ದಾಖಲೆಗಳು ಹಾಗೂ ಸಾಕ್ಷ್ಯಗಳು, ಉಪವಿಭಾಗಾಧಿಕಾರಿಯವರ ಸಾಕ್ಷ್ಯಗಳು ಹಾಗೂ ದಾಖಲೆಗಳು ಹಾಗೂ ಗ್ರಾಹಕರ ನಿವೇದನೆ ಹಾಗೂ ದಾಖಲೆಗಳನ್ನು ಕುಲಂಕುಷವಾಗಿ ಪರಿಶೀಲಿಸಿದ್ದು ಈ ಕೆಳಗಿನಂತೆ ಆದೇಶಿಸಿದೆ.

29/9/18

# ಆದೇಶ

ಆದೇಶ ಸಂಖ್ಯೆ.ಬೆ/ಗ್ರಾವೇ/ಪ್ರ.ಸ.14/2018-19/ 4884-93 ದಿನಾಂಕ : 29 SEP 2018

1. ಜುಲೈ-2016 ರಿಂದ ಡಿಸೆಂಬರ್-2016 ರ ವರೆಗೆ ವಿಧಿಸಿರುವ ರೂ. 56498.00 ಗಳನ್ನು ದಿನಾಂಕ 29.08.2016 ರಿಂದ 14.01.2017 ರ ವರೆಗೆ ಪರಿಷ್ಕರಿಸುವುದು.
2. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ(ವಿ), ಮಾಪಕ ತಪಾಸಣಾ ವಿಭಾಗದವರ ವರದಿಯನ್ನುದರಿಸಿ ಜನವರಿ-2017 ರಿಂದ ಮಾರ್ಚ-2017 ರ ಅವಧಿಗೆ ವಿಧಿಸಿರುವ ಹಿಂಬಿಲ್ಲು ರೂ. 37671.00 ಕ್ರಮಬದ್ಧವಾಗಿರುತ್ತದೆ.
3. ಏಪ್ರೀಲ್-2017 ರಿಂದ 21-07-2017 ರ ಅವಧಿಗೆ ಜಕಾತಿ ದರದ ಎರಡು ಪಟ್ಟು ದರದಲ್ಲಿ ವಿಧಿಸಿರುವ ಹಿಂಬಿಲ್ಲು ರೂ. 55340.00 ಗಳನ್ನು ದಿನಾಂಕ 01.04.2017 ರಿಂದ 12.04.2017 ರ ವರೆಗೆ ಜಕಾತಿ ದರದ ಎರಡು ಪಟ್ಟು ಹಿಂಬಿಲ್ಲು ಹಾಗೂ ದಿನಾಂಕ 13.04.2017 ರಿಂದ 21.07.2017 ರ ವರೆಗೆ ಸಾಮಾನ್ಯ ದರ (Normal Rate) ದಲ್ಲಿ ಬಿಲ್ಲು ಪರಿಷ್ಕರಿಸುವುದು.

| | | |
|---|---|---|
| 29/9/18 | 29/9/18 | |
| (ಎಸ್ ಎಸ್ ಸಾಣಿಕೊಪ್ಪ) | (ಎಸ್.ಆರ್. ಮಂಜಪ್ಪ) | (ಗಿರಿಧರ ಕುಲಕರ್ಣಿ) |
| ವಕೀಲರು | ಉಪಲೆಕ್ಕನಿಯಂತ್ರಣಾಧಿಕಾರಿ | ಅಧೀಕ್ಷಕ ಅಭಿಯಂತರರು(ವಿ) |
| ಸದಸ್ಯರು | ಸದಸ್ಯರು, | ಅಧ್ಯಕ್ಷರು, |

**ಪ್ರತಿ:**

1. ಆರ್ಥಿಕ ಸಲಹೆಗಾರರು, ನಿಗಮ ಕಚೇರಿ ಹುವಿಸಕಂನಿ., ನವನಗರ ಹುಬ್ಬಳ್ಳಿ ರವರ ಮಾಹಿತಿಗಾಗಿ.
2. ಮುಖ್ಯ ಅಭಿಯಂತರರು(ವಿ) ಬೆಳಗಾವಿ ವಲಯ ಹುವಿಸಕಂನಿ., ಬೆಳಗಾವಿ ರವರ ಮಾಹಿತಿಗಾಗಿ.
3. ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ)/(ಆಡಳಿತ ಮತ್ತು ಮಾಸಂಅ) ನಿಗಮ ಕಚೇರಿ ಹುವಿಸಕಂನಿ., ನವನಗರ ಹುಬ್ಬಳ್ಳಿ ರವರ ಮಾಹಿತಿಗಾಗಿ
4. ನಿಯಂತ್ರಣಾಧಿಕಾರಿ(ಆಂ.ಪ) ನಿಗಮ ಕಚೇರಿ ಹುವಿಸಕಂನಿ., ನವನಗರ ಹುಬ್ಬಳ್ಳಿ ರವರ ಮಾಹಿತಿಗಾಗಿ
5. ಕಾರ್ಯನಿರ್ವಾಹಕ ಅಭಿಯಂತರರು(ವಿ) ಕಾ ಮತ್ತು ಪಾ ನಗರ ವಿಭಾಗ ಹುವಿಸಕಂನಿ., ಬೆಳಗಾವಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
6. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಕಾ ಮತ್ತು ಪಾ ನಗರ ಉಪವಿಭಾಗ-2, ಹುವಿಸಕಂನಿ., ಬೆಳಗಾವಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
7. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಎಲ್.ಟಿ.ಎಂ.ಆರ್ ನಗರ ಉಪವಿಭಾಗ, ಹುವಿಸಕಂನಿ., ಬೆಳಗಾವಿ ರವರ ಮಾಹಿತಿಗಾಗಿ
8. ಆಪ್ತ ಕಾರ್ಯದರ್ಶಿ, ಓಂಬಡ್ಸಮನ್, ಕೆ.ಇ.ಆರ್.ಸಿ, 6 ಮತ್ತು 7 ನೇ ಮಹಡಿ, ಮಹಾಲಕ್ಷ್ಮೀ ಚೇಂಬರ್ಸ, ನಂ:9/2, ಎಂ.ಜಿ. ರೋಡ, ಬೆಂಗಳೂರು. ಸದರಿ ಮಾಹಿತಿಯನ್ನು ಓಂಬಡ್ಸಮನ್, ಕೆ.ಇ.ಆರ್.ಸಿ, ಬೆಂಗಳೂರು ರವರ ಗಮನಕ್ಕೆ ತರುವುದು.
9. ಶ್ರೀ ಎಸ್.ಎಸ್. ಶಾ, ಮಾಣಿಕೆ ಎಂಟರ್‌ಪ್ರೈಸಸ್, ಎನ್-15, ಇಂಡಸ್ಟ್ರಿಯಲ್ ಎಸ್ಟೇಟ್, ಉದ್ಯಮಭಾಗ, ಬೆಳಗಾವಿ.